# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಓ ಎಸ್ ನಂ.1/2023

ಸಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರು : ಪ್ರಸನ್ನ ಜೈಯಕುಮಾರ ಬಿ

ತಂದೆಯ ಹೆಸರು : ಬಸಬಯ್ಯ

ವಯಸ್ಸು : 56 ವರ್ಷ

ಉದ್ಯೋಗ : ಪ್ರಭಾರಿ ADLR ಅಂಕೋಲಾ

ವಾಸ : ಅಂಕೋಲಾ

ದಿನಾಂಕಃ 31-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು

**<u>ಮುಖ್ಯ ವಿಚಾರಣೆಃ ಅರ್ಜಿದಾರರ</u> ಪರ ಶ್ರೀ ಎಸ್ ವಕೀಲರಿಂದಃ**

1. ನಾನು ಅಂಕೋಲಾ ADLR ಕಚೇರಿಯಲ್ಲಿ ನವಂಬರ 2024 ರಿಂದ ಪ್ರಭಾರಿ ADLR ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ . ನಾನು ನ್ಯಾಯಾಲಯದ ಆದೇಶದಂತೆ ಒಟ್ಟು 7 ಪ್ರಕರಣಗಳ 9 ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ . ಸದ್ರಿ 9 ದಾಖಲಾತಿಗಳು ನಿಸಿ-1 ರಿಂದ 9 ಎಂದು ಗುರುತಿಸಲಾಯಿತು .ಸದ್ರಿ ನಿಸಿ-1 ರಿಂದ 9 ರ ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿದ ಅರ್ಜಿಯಂತೆ ಹಾಜರು ಪಡಿಸಿದ ದಾಖಲಾತಿಗಳು ಆಗಿರುತ್ತವೆ . ಅರ್ಜಿದಾರರು ಅರ್ಜಿಯನ್ನು ನಾಡ ಕಚೇರಿಯಲ್ಲಿ online ಮುಖಾಂತರ ಹಾಕುತ್ತಾರೆ . ಅದು ನಮ್ಮ ಕಚೇರಿಯಲ್ಲಿ ಬರುತ್ತದೆ . ಅದನ್ನು ನಾವು ಪರಿಶೀಲನೆ ಮಾಡಿ ಸರಿ ಇದ್ದರೆ ಅದನ್ನು ಹಂಚಿಕೆ ಮಾಡುತ್ತೇವೆ . ನಂತರ ಸರ್ವೆಯರ ರವರು ಈ ಅರ್ಜಿಯ ಪ್ರಕಾರ ದಾನಕ್ಕೆ ಕೊಡುವವರು ಮತ್ತು ದಾನಕ್ಕೆ ಪಡೆಯುವರಿಗೆ ನೋಟಿಸನ್ನು ಕೊಡುತಾತರೆ . ನೋಟಿಸನ್ನು ಕೊಟ್ಟು ನಿಗದಿತ ದಿನಾಂಕದಂದು ಸ್ಥಳಕ್ಕೆ ಹೋಗಿ ಇಬ್ಬರ ಸಮಕ್ಷಮ ಅಳತೆ ಮಾಡಿ ನಕ್ಷೆ ತಯಾರಿಸಿ ಕಚೇರಿಗೆ ಸಲ್ಲಿಸುತ್ತಾರೆ . ನಂತರ ಕಚೇರಿಯಲ್ಲಿ ಪರಿಶೀಲನೆ ಮಾಡಿ ಸರಿ ಇದ್ದರೆ ಅದನ್ನು ದೃಢಿಕರಣ ಮಾಡಿ online ಮುಖಾಂತರ ನಕೆಯನ್ನು ವಿತರಿಸಲಾಗುತ್ತದೆ . Online ನಲ್ಲಿ ಪಡೆದ ದಾಖಲಾತಿಗಳನ್ನು ಅವರು ಪಡೆದು ಮುಂದುವರೆದು ಅವರು

sub registrar ಕಚೇರಿಯಲ್ಲಿ ಅದನ್ನು ನೋಂದಣಿ ಮಾಡಿಸಿಕೊಳ್ಳಬಹುದು. ನೋಂದಣಿ ಮಾಡಿಸುವುದು ಅರ್ಜಿದಾರರ ಇಚ್ಚೆಗೆ ಬಿಟ್ಟದ್ದು ಶೇ 90 ರಷ್ಟು ಅರ್ಜಿ ದಾರರು ನನ್ನ ಪ್ರಕಾರ ನೋಂದಣಿ ಮಾಡಿಸಿಕೊಳ್ಳುತ್ತಾರೆ . ನಾವು ಕೊಟ್ಟ ನಕ್ಷೆಯಂತೆ ಅದಕ್ಕೆ 6 ತಿಂಗಳ ಕಾಲಾವಕಾಶ ಇರುತ್ತದೆ . ನಂತರ ಅದು ಆ ಕಾಲಾವಧಿಯಲ್ಲಿ registered ಮಾಡಿಸಿಕೊಳ್ಳದಿದ್ದರೆ ಸದ್ರಿ ನಕ್ಷೆ ಗೆ ಯಾವುದೇ ಸಿಂಧುತ್ವ ಇರುವುದಿಲ್ಲ . ನಾನು ಹಾಜರು ಪಡಿಸಿದ ನಕ್ಷೆಯಲ್ಲಿ ಕೊನೆಯ ಯಾವ ದಿನಾಂಕದಂದು ಕಾಲಾವಕಾಶ ಮುಗಿಯುತ್ತದೆ ಎಂದು ನಮೂದಾಗಿರುತ್ತದೆ . ಈ ಎಲ್ಲಾ ದಾಖಲಾತಿಗಳು ದಾನ ಪತ್ರ ಮಾಡಲು ಕೊಟ್ಟಂತಹ ದಾಖಲಾತಿಗಳು ಅಧಿಕೃತವಾಗಿ ಅವು ದಾನಕ್ಕಾಗಿಯೇ ನೀಡಿದಂತಹ ನಕ್ಷೆ ಯಾಗಿರುತ್ತದೆ .

**<u>ಪಾಟೀ ಸವಾಲುಃ</u> ವಾದಿ ಪರ ಶ್ರೀ ಎಮ್ ಪಿ . ಬಿ ವಕೀಲರಿಂದಃ**

2. ನೀವು ಹಾಜರು ಪಡಿಸಿದ ದಾಖಲಾತಿಯಂತೆ ಅದರ ಸಿಂಧುತ್ವ ಯಾವಾಗ ಕೊನೆಗೊಳ್ಳುತ್ತದೆ ಎಂದರೆ ದಿಃ 12-08-2020 ಕ್ಕೆ ಮುಕ್ತಾಯವಾಗಿರುತ್ತದೆ . ಅದರಲ್ಲಿ ಆ ದಾಖಲಾತಿಯಲ್ಲಿ ಆ ದಿನಾಂಕವನ್ನು ನಮೂದು ಮಾಡಿ validity expired ಎಂದು ಬರೆಯಲಾಗಿರುತ್ತದೆ ಎಂದರೆ ಹೌದು . ಅದು online copy ಯಲ್ಲಿ ಕೂಡ ಇರುತ್ತದೆ . ಸಾಕ್ಷಿ ಪುನಃ ಮುಂದುವರೆದು ಒಂದು ವೇಳೆ validity period ಮುಗಿದರೆ online ದಲ್ಲಿ ಸದ್ರಿ ದಾಖಾಲತಿಗಳನ್ನು ಪರಿಶೀಲನೆ ಮಾಡಲು open ಮಾಡಿದಾಗಲೂ ಸಹ ಅವುಗಳು open ಆಗುವುದಿಲ್ಲ . ಈಗ ಹಾಜರು ಪಡಿಸಿದ 9 ದಾಖಲಾತಿಗಳಲ್ಲಿ ಅದರಲ್ಲಿ ಯಾವುದಾದರೂ ದಾಖಲಾತಿಗಳು ನೋದಾಯಿತ ಪತ್ರದ ಮೇಲೆ ಅವಲಂಬಿತವಾಗಿರುತ್ತದೆಯಾ ಎಂದರೆ ಇಲ್ಲ.ಸಾಕ್ಷಿಯು ಪುನಃ ಮುಂದುವರೆದು ಅದು ನೋಂದಣಿ ಪೂರ್ವ ನಕ್ಷೆ ಯಾಗಿರುತ್ತದೆ. ನಿಮ್ಮ ಪ್ರಕಾರ ದಾನ ಪತ್ರವು ಹಣದ ಕೊಡುಕೊಳ್ಳುವ ವ್ಯವಹಾರ ಮೇಲೆ ಆಗುತ್ತದೊ ಇಲ್ಲವೊ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈಗ ನೀವು ಹಾಜರು ಪಡಿಸಿದ ದಾಖಲಾತಿಗಳಲ್ಲಿ ಅಸ್ತಿಗೆಸಂಬಧಿಸಿದಂತೆ ದಯಾನಂದ ನಾಯ್ಕ ಹಾಗೂ ಉಳಿದ ಅರ್ಜಿದಾರರರು ವಾಂಟಣಿ ಮಾಡಿಕೊಂಡಿರುತ್ತಾರೆ ಎಂದು ಎಲ್ಲಾದರೂ ಬರೆದುಕೊಂಡದ್ದು ಇರುತ್ತದೆಯಾ ಎಂದರೆ ಇಲ್ಲ. ವಾಂಟಣಿ ದಸ್ತಾವೇಜನ್ನು ನಂಬಿಕೊಂಡು ನೀವು ದಾಖಲಾತಿಗಳನ್ನು ಮಾಡಿದರೆ ಆ ವಾಂಟಣಿ ದಸ್ತಾವೇಜಿನ ರಜಿಸ್ಟರ ನಂಬರ ಬೇಕಾಗುತ್ತದೆ ಎಂದರೆ ನಮ್ಮ ಕಚೇರಿಯಲ್ಲಿ ಈ ಕಾಲಾವಧಿಯಲ್ಲಿ ಅದನ್ನು

ಸಲ್ಲಿಸಿಲ್ಲ . ಇದಾದ ನಂತರ ಅವರು ಸಲ್ಲಿಸಿರುತ್ತಾರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. Validity period expired ಆದರೆ ಆ ದಾಖಲಾತಿಗಳ transaction ಏನಾಗುತ್ತದೆ ಎಂದರೆ ಅದು dead ಆಗುತ್ತದೆ . ಆಸ್ತಿಗಳನ್ನು ಮಾರಾಟಕ್ಕೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಇದ್ದರೆ ದಾಖಲಾತಿಗಳಲ್ಲಿ ಕ್ರಯ ಉದ್ದೇಶಕ್ಕಾಗಿ ಎಂದು ಅರ್ಜಿಯಲ್ಲಿ ನಮೂದು ಮಾಡುತ್ತಾರೆ . ನಾನು ಹಾಜರು ಪಡಿಸಿದ ದಾಖಲಾತಿಗಳಲ್ಲಿ ಕ್ರಯ ಉದ್ದೇಶಕ್ಕಾಗಿ ಎಂದು ನಮೂದು ಮಾಡಿದ್ದು ಇರುವುದಿಲ್ಲ .

**ಪಾಟೀ ಸವಾಲುಃ** 6 ಮತ್ತು 8 ನೇ ಪ್ರತಿ**ವಾದಿ ಪರ ಶ್ರೀ ಜೆ.ಟಿ.ಎಚ್ ವಕೀಲರಿಂದಃ**

3. ನಾನು ಹಾಜರು ಪಡಿಸಿದ ಎಲ್ಲಾ ದಾಖಲಾತಿಗಳಲ್ಲಿ ದಯಾನಂದ ನಾಯ್ಕ ಎಂಬ ಹೆಸರು ಇರುತ್ತದೆ ಎಂದರೆ ಹೌದು . ಅದು ಅರ್ಜಿದಾರರ ಹೆಸರು ಆಗಿರುತ್ತದೆ . ಎಲ್ಲಾ ದಾಖಲಾತಿಗಳಲ್ಲಿ ಅವರ ಹೆಸರು ಕಾಣುತ್ತದೆ ಎಂದರೆ ಸರಿ .

ಪುನಃ ಮುಂದುವರೆದು ಎಮ್ ಪಿ . ಬಿ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಬಹುದು ಎಂದು ಕೇಳಿದ ಕೋರಿಕೆಯಂತೆ ಶ್ರೀ ಎಮ್ ಪಿ . ಬಿ ವಕೀಲರು ಮಾಡಿದ ಪಾಟೀ ಸವಾಲನ್ನು 6 ಮತ್ತು 8 ನೇ ಪ್ರತಿವಾದಿ ಪರ ವಕೀಲರು ಮಾಡಿದ ಮುಂದುವರೆದ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲಾಯಿತು

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.